( ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು )

**ದಿಃ25/07/2024**
**ಅಸಲು ದಾವೆ.ನಂ.146/2010**
**ಡಿ.ಡಬ್ಲ್ಯೂ1**

( ಮುಖ್ಯ ವಿಚಾರಣೆಃ ಶ್ರೀ. ಎಂ.ಎಲ್.ಡಿ. ವಕೀಲರಿಂದ 1 ನೇ ಪ್ರತಿವಾದಿ ಪರವಾಗಿ )

ನನ್ನ ಮುಖ್ಯ ವಿಚಾರಣೆಯ ಬದಲಿಗೆ ಪ್ರಮಾಣ ಪತ್ರವನ್ನು ಸಲ್ಲಿಸಿದ್ದೇನೆ ಅದರಲ್ಲಿ ಇರುವ ವಿಷಯಗಳನ್ನು ನಾನೇ ಹೇಳಿ ಬರೆಸಿದ್ದೇನೆ, ಸಹಿಗಳು ನನ್ನದೆ ಇದೆ. ನಾನು ಈ ಕೆಳಗೆ ಹೇಳಿದ ದಾಖಲೆಗಳನ್ನು ಹಾಜರು ಪಡಿಸಿರುತ್ತೇನೆ. ಅವುಗಳನ್ನು ಪ್ರಸ್ತುತ ದಾವೆಯಲ್ಲಿ ಗುರುತಿಸಬೇಕಾಗಿ ಕೋರಿಕೊಳ್ಳುತ್ತೇನೆ.

ಸದರಿ ದಾಖಲೆಗಳನ್ನು ಈ ಕೆಳಗಿನಂತೆ ಗುರುತಿಸಲಾಯಿತು.

ನನ್ನ ತಂದೆ ನನ್ನ ಪರವಾಗಿ ಬರೆದುಕೊಟ್ಟ ಸಾಮಾನ್ಯ ಅಧಿಕಾರ ಪತ್ರವನ್ನು ಹಾಜರುಪಡಿಸಿರುತ್ತೇನೆ. ಅದನ್ನು ನಿಡಿ-4 ಎಂದು ಗುರುತಿಸಲಾಯಿತು.

ದಿಃ19-11-1977 ರ ನ್ಯಾಯಾಲಯದಿಂದ ದೃಡೀಕೃತ ಕ್ರಯ ಪತ್ರವನ್ನು ಹಾಜರುಪಡಿಸಿರುತ್ತೇನೆ ( ಅದರ ಮೂಲ ಪ್ರತಿ 2 ನೇ ಪ್ರತಿವಾದಿಯ ಬಳಿ ಇರುತ್ತದೆ. ಆದ್ದರಿಂದ ನಾನು ದೃಡೀಕೃತ ನಕಲನ್ನು ಹಾಜರು ಪಡಿಸಿರುತ್ತೇನೆ.) ಅದನ್ನು ನಿಡಿ-4 ಎಂದು ಗುರುತಿಸಲಾಯಿತು.

ದಿಃ26-11-1992 ರ ನ್ಯಾಯಾಲಯದಿಂದ ದೃಡೀಕೃತ ಕ್ರಯ ಪತ್ರವನ್ನು ಹಾಜರುಪಡಿಸಿರುತ್ತೇನೆ ( ಅದರ ಮೂಲ ಪ್ರತಿ 2 ನೇ ಪ್ರತಿವಾದಿಯ ಬಳಿ ಇರುತ್ತದೆ. ಆದ್ದರಿಂದ ನಾನು ದೃಡೀಕೃತ ನಕಲನ್ನು ಹಾಜರು ಪಡಿಸಿರುತ್ತೇನೆ.) ಅದನ್ನು ನಿಡಿ-5 ಎಂದು ಗುರುತಿಸಲಾಯಿತು.

ಎಂ.ಆರ್.ನಂದಃ 3/1994-95 ರ ನ್ಯಾಯಾಲಯದಿಂದ ದೃಡೀಕೃತ ಹಕ್ಕು ಬದಲಾವಣೆ ವಹಿಯನ್ನು ಹಾಜರುಪಡಿಸಿರುತ್ತೇನೆ. ಅದನ್ನು ನಿಡಿ-6 ಎಂದು ಗುರುತಿಸಲಾಯಿತು.

ಎರಡು ಕೈಬರಹದ ಪಹಣಿ ಪತ್ರಿಕೆಗಳ ನ್ಯಾಯಾಲಯದ ದೃಡೀಕೃತ ನಕಲುಗಳನ್ನು ಹಾಜರುಪಡಿಸಿದ್ದು, ಅವುಗಳನ್ನುಕ್ರಮವಾಗಿ ನಿಡಿ-7 ಮತ್ತು ನಿಡಿ-8 ಎಂದು ಗುರುತಿಸಲಾಯಿತು.

ಕರ್ನಾಟಕ ರಾಜ್ಯ ಪತ್ರದ ನ್ಯಾಯಾಲಯದಿಂದ ದೃಡೀಕೃ ನಕಲನ್ನು ಹಾಜರುಪಡಿಸಿರುತ್ತೇನೆ. ಅದನ್ನು ನಿಡಿ-8 ಎಂದು ಗುರುತಿಸಲಾಯಿತು.

ಕಾನೂನು ಪರಿಶೀಲನಾ ವರದಿಯ ನ್ಯಾಯಾಲಯದಿಂದ ದೃಡೀಕೃತ ನಕಲನ್ನು ಹಾಜರುಪಡಿಸಿರುತ್ತೇನೆ. ಅದನ್ನು ನಿಡಿ-9 ಎಂದು ಗುರುತಿಸಲಾಯಿತು.

ದಿಃ29-10-2018 ರ ನ್ಯಾಯಾಲಯದಿಂದ ದೃಡೀಕೃತ ವಿಭಾಗ ಸದನಾ ಪತ್ರವನ್ನು ಹಾಜರುಪಡಿಸಿರುತ್ತೇನೆ. ಅದನ್ನು ನಿಡಿ-10 ಎಂದು ಗುರುತಿಸಲಾಯಿತು.

ದಿಃ30-04-2022 ರ ನ್ಯಾಯಾಲಯದಿಂದ ದೃಡೀಕೃತ ಅಡಮಾನ ಪತ್ರವನ್ನು ಹಾಜರುಪಡಿಸಿರುತ್ತೇನೆ ಅದನ್ನು ನಿಡಿ-11 ಎಂದು ಗುರುತಿಸಲಾಯಿತು.

ಒಂದು ನ್ಯಾಯಾಲಯದಿಂದ ದೃಡೀಕೃತ ಋಣಭಾರ ರಾಹಿತ್ಯ ಪತ್ರವನ್ನು ನ್ಯಾಯಾಲಯದಿಂದ ದೃಡೀಕೃತ ನಕಲನ್ನು ಹಾಜರುಪಡಿಸಿರುತ್ತೇನೆ. ಅದನ್ನು ನಿಡಿ-12 ಎಂದು ಗುರುತಿಸಲಾಯಿತು.

ನ್ಯಾಯಾಲಯದಿಂದ ದೃಡೀಕೃತ Bank statement ನ್ನು ಹಾಜರುಪಡಿಸಿರುತ್ತೇನೆ. ಅದನ್ನು ನಿಡಿ-13 ಎಂದು ಗುರುತಿಸಲಾಯಿತು.

(ಮುಂದುವರೆದ ಮುಖ್ಯ ವಿಚಾರಣೆಃ 1 ನೇ ಪ್ರತಿವಾದಿಗಳ ಪರ ವಕೀಲರು ಸಮಯಾವಕಾಶವನ್ನು ಕೋರಿದ್ದು ಅನುಮತಿಸಲಾಯಿತು)

( ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು )

ಓ.ಹೇ.ಕೇ.ಸ.ಇದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು,

ಜೆ.ಎಂ.ಎಫ್.ಸಿ,ಅರಕಲಗೂಡು.